JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಮಾತೃ ಆರಾಧನೆ

**(ಕುರುಮನ್ಸ್ ಬುಡಕಟ್ಟಿನ ಕಸುವಮ್ಮ ಆಚರಣೆ)**

ಶಿಲ್ಪ ಕೆ ಎಚ್

ಸಂಶೋಧನ ವಿದ್ಯಾರ್ಥಿ

ಬುಡಕಟ್ಟು ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ - ೫೮೩ ೨೭೬

ಫೋ: ೭೭೬೦೬೭೭೯೭೦ ಮೇಲ್: shilpakh95@gmail.com

ಆದಿಮಾನವನಿಂದ ನಾಗರಿಕ ಸಮಾಜದವರೆಗಿನ ಈ ಪಯಣದಲ್ಲಿ ಬೇಟೆ, ಆಹಾರ ಸಂಗ್ರಹದಿಂದ ಆಧುನಿಕ ತಂತ್ರಜ್ಞಾನದವರೆಗೂ ಮಾನವ ಕಾಡುಮೇಡುಗಳಲ್ಲಿ ಅಲೆದು ಬೆಟ್ಟ ಗುಡ್ಡ ಗುಹೆ, ಪೊಟರೆಗಳಲ್ಲಿ ವಾಸಿಸಿ ಗಡ್ಡೆ ಗೆಣಸು ತಿಂದು, ಬೇಟೆಯಾಡಿ ಹಸಿಮಾಂಸ ಸೇವಿಸಿ, ಅಲೆಮಾರಿ ಜೀವನವನ್ನು ಸಾಗಿಸುತ್ತಿದ್ದ ಬದುಕಿಗಾಗಿ ಪಶುಪಾಲನೆ ಮಾಡಿ, ಬೆಂಕಿಯನ್ನು ಶೋಧಿಸಿ, ಮರ ಕಡಿದು ಗುಡಿಸಲು ಕಟ್ಟಿ, ಒಂದೆಡೆ ನೆಲೆಸಿದನು. ಮೂಲಿಗನಾಗಿ ಕೃಷಿಯನ್ನು ಕಂಡುಕೊಂಡು ಕೃಷಿಕನಾಗಿ ಬದುಕನ್ನು ಕಟ್ಟಿಕೊಂಡ. ತನ್ನ ಆಲೋಚನಾ ಕ್ರಮ ಬದಲಾದಂತೆ ನಾಗರಿಕನಾಗಿ ತಾಂಡ, ಹಟ್ಟಿ, ಹಳ್ಳಿ, ಊರು, ನಗರಗಳನ್ನು ಸ್ಥಾಪಿಸಿದನು. ಈ ಪಯಣದಲ್ಲಿ ಅನೇಕ ರೂಢಿ, ಆಚರಣೆಗಳು, ಸಂಪ್ರದಾಯಗಳು, ಸಂಸ್ಕೃತಿ ಸೃಷ್ಟಿಯಾದವು.

ನೆಲೆನಿಂತ ಸಮಯದಲ್ಲಿ ಆಹಾರಕ್ಕಾಗಿ ಸಾಮಾನ್ಯವಾಗಿ ಗಂಡಸರು ಮನೆಯಿಂದ ಹೊರಗೆ ಹೋಗುತ್ತಿದ್ದು ಹೆಣ್ಣು ಮನೆಯಲ್ಲೇ ಇದ್ದು ಮಕ್ಕಳನ್ನು ಪೋಷಿಸುವ ಹೊಣೆ ಹೊತ್ತು ಸಮಾಜವನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಸಂದರ್ಭದಲ್ಲಿ ಮಹಿಳೆಯು ಕೃಷಿಯನ್ನು ಕಂಡುಕೊಂಡಳು. ಆಹಾರ ಧಾನ್ಯಗಳನ್ನು ಬೆಳೆದು ಮತ್ತು ಸಂಗ್ರಹಿಸಿ ಸಂಸಾರವನ್ನು ಪೋಷಿಸುತ್ತಿದ್ದ ಮಹಿಳೆ ಕುಟುಂಬದಲ್ಲಿ ಅತೀ ಮುಖ್ಯ ಪಾತ್ರವನ್ನು ವಹಿಸುತ್ತಿದ್ದಳು.

"ಸಮಾಜದ ಬೆಳವಣಿಗೆಯ ಮೊದಲ ಹಂತದಲ್ಲಿ ಮಾತೃವೇ ಧರ್ಮದ ಕೇಂದ್ರ ಸ್ಥಾನದಲ್ಲಿದ್ದಳು. ಆಹಾರ ಸಂಗ್ರಹಣೆ ಮತ್ತು ಆಹಾರ ಉತ್ಪದನೆ ಸ್ತ್ರೀಯ ಕರ್ತವ್ಯವಾಗಿತ್ತು. ಇದರಿಂದ ಸ್ತ್ರೀಯ ಸ್ಥಾನಮಾನ ಹೆಚ್ಚಿತು. ಈ ಮಾನ್ಯತೇ ಅವಳನ್ನು ದೈವತ್ವಕ್ಕೇರಿಸುವವರೆಗೆ ಹೋಯಿತು" (ಸಿದ್ಧಲಿಂಗಯ್ಯ ೧೯೯೭, ಪು ಸಂ: ೧೭)

ಮಾನವ ಸಮಾಜದಲ್ಲಿ ಸಾಂಸ್ಕೃತಿವಾಗಿ ರೂಪುಗೊಂಡ ದೈವಾರಾಧನೆ ಇಂದು ಜನ ಸಮುದಾಯದ ಅಸ್ತಿತ್ವದ ಚಹರೆಗಳಾಗಿವೆ. ಆಚರಣೆಗಳ ರೂಪದಲ್ಲಿ ಬುಡಕಟ್ಟುಗಳ ಅಸ್ಮಿತೆಯನ್ನು ತಿಳಸುವ ಮಾತೃ ಆರಾಧನೆ ಕುರಿತು ಅಥೈ□ಸುವ ಪ್ರಯತ್ನದಲ್ಲಿ ಪ್ರಸ್ತುತ ಈ ಲೇಖನವನ್ನು ಸಿದ್ಧಪಡಿಸಲಾಗಿದೆ. ಕುರುಮನ್ಸ್ ಬುಡಕಟ್ಟಿನ ವಿಷೇಶ ಆಚರಣೆಯಾದ ಕಸುವಮ್ಮ ಕೊಟ್ಟು ಕುರಿತು ಕ್ಷೇತ್ರಕಾಯ□ದಲ್ಲಿ ದೊರೆತ ನೇರ ಮಾಹಿತಿಯನ್ನು ಬರವಣಿಗೆಯ ಮೂಲಕ ಪ್ರಸ್ತುತ ಪಡಿಸಲಾಗಿದೆ.

**ಪೀಠಿಕೆ**

ಕೃಷಿ ಸಮಾಜದಲ್ಲಿ ಭೂಮಿ ಮುಖ್ಯ ಪಾತ್ರವಹಿಸಿದರೆ, ಕುಟುಂಬ ಪೋಷಿಸುವ ಪಾತ್ರ ಮಹಿಳೆಯದಾಗಿತ್ತು. ಭೂಮಿಯನ್ನು ತಾಯಿಗೆ ಮತ್ತು ಹೆಣ್ಣನ್ನು ಭೂಮಿಗೆ ಹೋಲಿಸಿ ಮಾತಾಡುವುದುಂಟು, ಏಕೆಂದರೆ ಇಬ್ಬರು ಹೊಸ ಸೃಷ್ಟಿಗೆ ಕಾರಣರಾಗುರುತ್ತಾರೆ, ಪೋಷಿಸುತ್ತಾರೆ ಮತ್ತು ರಕ್ಷಿಸುತ್ತಾರೆ. ಜಗತ್ತು ಮುಂದುವರಿಯುವುದಕ್ಕೆ ಜೀವ ಸೃಷ್ಟಿಸಲು ಕೇವಲ ಇಬ್ಬರಿಂದ ಮಾತ್ರ ಸಾಧ್ಯ ಒಂದು ಭೂಮಿ ಇನ್ನೊಂದು ತಾಯಿ. ಈ ಕಾರಣಗಳಿಂದಲೆ ಹೆಣ್ಣನ್ನು ಮತ್ತು ಭೂಮಿಯನ್ನು ಮಾತೆಯೆಂದು ಕರೆದು ಪೂಜನೀಯ ಸ್ಥಾನ ಕೊಟ್ಟು ಆರಾಧಿಸುವುದು ಮತ್ತು ಹೆಣ್ತನ, ತಾಯ್ತನ ಆಚರಣೆಯಲ್ಲಿ ಬಂದವು. ಮಾತೃ ಎಲ್ಲಕ್ಕೂ ಮೂಲವಾಗಿ ಮತ್ತು ಮೊದಲಿಗಳಾಗಿ ದೇವತೆಯಾಗಿ ಆರಾಧನೆಗೆ ಒಳಗಾದಳು.

ಜನ್ಮ ನೀಡಿ ಹಾಲುಣಿಸಿ ಸಾಕಿ ಸಲುಹಿ ಕುಟುಂಬದ ಮುಖ್ಯ ಪಾತ್ರವಹಿಸಿದ ಹೆಣ್ಣಿನ ಪರಂಪರೆ ಮಾತೃಪ್ರದಾನ ಸಮಾಜವಾಯಿತು. ಮಾತೃ ಆರಾಧನೆ ಕಲ್ಪನೆ ಅತೀ ಪ್ರಾಚೀನವಾದದ್ದು. ಪಿತೃ ದೇವರ ಕಲ್ಪನೆಗಿಂತ ಮೊದಲು ಮಾತೃ ದೈವಾರಾಧನೆ ಪ್ರಚಲಿತದಲ್ಲಿತ್ತು. ಪ್ರಕೃತಿಯನ್ನೇ ಮಾತೃ ರೂಪದಲ್ಲಿ ಕಾಣುತ್ತಿದ್ದರು.

ಮಾತೃದೈವಗಳ ಉಗಮದ ಬಗ್ಗೆ ರಾಸನ್ ಹೀಗೆ ಹೇಳುತ್ತಾರೆ “The idea of a generically female creative womb, mother of beasts plants and men which is complex analogy between earth its cave and the human communities of women seems to have taken roots in the mind of man probably by about 3000 bc”

ಆದಿಮ ಬುಡಕಟ್ಟುಗಳಲ್ಲಿ ಮಾತೃ ಆರಾಧನೆಗೆ ಹೆಚ್ಚಿನ ಆದ್ಯತೆಯನ್ನು ನೀಡುವುದರ ಜೊತೆಗೆ ಪ್ರತಿಯೊಂದರಲ್ಲಿ ತಾಯಿ ಸ್ವರೂಪ ಕಾಣುತ್ತಾರೆ. ಶಿಷ್ಟ ಸಂಪ್ರದಾಯಗಳಲ್ಲಿ ಹೆಚ್ಚಾಗಿ ಪಿತೃ ಆರಾಧನೆಯ ಪ್ರಾಮುಖ್ಯತೆಯನ್ನು ಕಾಣಬಹುದು. ಬುಡಕಟ್ಟುಗಳಲ್ಲಿ ಮತ್ತು ತಳಸಮುದಾಯಗಳ ದೇವರುಗಳಲ್ಲಿ ಹೆಣ್ಣು ದೇವರ ಸಂಖ್ಯೆ ಹೆಚ್ಚು. ಅಲೆಮಾರಿ ಪಶುಪಾಲನೆ ಮತ್ತು ಕೃಷಿ ಸಮಾಜದಲ್ಲಿ ಅಮ್ಮ ಅನೇಕ ರೂಪದಲ್ಲಿ ಆರಾಧಿಸಲ್ಪಡುತ್ತಾಳೆ. ಊರಮ್ಮ, ಗಡಿಯಮ್ಮ, ಮಾರಮ್ಮ, ಹೊಲದಮ್ಮ, ಕಾಡಮ್ಮ, ರೋಗದ ಅಮ್ಮಗಳು ಇತ್ಯಾದಿ. ಈ ಸಂದರ್ಭದಲ್ಲಿ ಪ್ರಕೃತಿಯ ಶಕ್ತಿಗಳೆಲ್ಲವು ಅಮ್ಮನ (ತಾಯಿ) ರೂಪದಲ್ಲಿ ಗ್ರಹಿಸಿ ಪೂಜಿಸುವ ಸಂಪ್ರದಾಯ ಬೆಳೆಯಿತು. ಆದರೆ ವೈಧಿಕರಲ್ಲಿ ಈ ಪರಂಪರೆ ಪುರುಷ ರೂಪದಲ್ಲಿರುವುದನ್ನು ಹೆಚ್ಚಿನ ಪ್ರಮಾಣದ್ದಲ್ಲಿ ಕಾಣುತ್ತೇವೆ. ಹಾಗಾಗಿ ವೈಧಿಕರಲ್ಲಿ ಅಗ್ನಿ, ವಾಯು, ವರುಣ, ಇಂದ್ರ, ಸೂರ್ಯ ಪುರುಷದೇವರ ರೂಪದಲ್ಲಿ ಕಾಣಸಿಗುತ್ತದೆ. ಆದರೆ ಬುಡಕಟ್ಟುಗಳಲ್ಲಿ ಎಲ್ಲಮ್ಮ, ಗಾಳಮ್ಮ, ದುರ್ಗಮ್ಮ, ಜ್ಯೋತಮ್ಮ ರೂಪದಲ್ಲಿ ಕಾಣಸಿಗುತ್ತಾರೆ.

“ವೇದ ಕಾಲದಲ್ಲಿ ಮಾತೃ ಆರಾಧನೆ ಇತ್ತೆಂಬುದು ಒಂದು ಸರಳ ಪ್ರಶ್ನೆ. ಆದರೆ ಇದೊಂದು ಬಿಡಿಸಲಾಗದ ಘಂಟು. ಯಾಕೆಂದರೆ ಪಿತೃ ಪ್ರಧಾನ ಸಮಾಜದಲ್ಲಿ ಬೆಳೆದ ಧರ್ಮ ಇದ್ದುದರಿಂದ ಈ ಆರಾಧನೆ ಇತ್ತೆಂಬುದು ಕಷ್ಟಸಾಧ್ಯ. ಸಿಂಧು ನಾಗರಿಕತೆಯ ನಂತರ ಬಂದ ಸಂಸ್ಕೃತಿ ಇದಾದುದರಿಂದ ಇದು ಯಾವುದರ ಮೇಲೆ ಯಾವುದು ಪರಿಣಾಮ ಬೀರಿದೆ ಎಂಬುದನ್ನೂ ಗಮನಿಸಬಹುದು. ಆರ್ಯರು ಸುಮಾರು ಕ್ರಿ ಪೂ ೨೦೦೦ ನಂತರದಲ್ಲಿ ಭಾರತಕ್ಕೆ ಬಂದರು.

ಆರ್ಯ ಪರಂಪರೆಯಲ್ಲಿ ಎರಡು ಭಾಗಗಳನ್ನು ಮಾಡಿಕೊಳ್ಳಬಹುದು ಮೊದಲನೆಯದಾಗಿ ಸೂರ್ಯ ಆರಾಧನೆಯ ಘಟ್ಟ ಎರಡನೆಯದು ಇಂದ್ರನ ಆರಾಧನೆಯ ಘಟ್ಟ. ಸೂರ್ಯ ಆಗ್ನಿಯರು ಮನುಷ್ಯ ರೂಪದಿಂದಿರುವುದು ಮುಖ್ಯವಾಗಿ ಕಂಡುಬರುತ್ತದೆ.” (ಕಲವೀರ ಮನ್ವಾಚಾರ ೧೯೯೫)

ಭಾರತದ ಮೂಲನಿವಾಸಿಗಳಾದ ದ್ರಾವಿಡರು ಮಾತೃ ದೇವತೆಗಳ ಆರಾಧಕರಾಗಿದ್ದರು. ಮನುಕುಲದ ರಕ್ಷಣೆ ಮಾಡುವ ತಾಯಿಯರೆ ಮಾತೃ ದೈವಗಳಾದರು. ಕಾಡನ್ನು ಸಂರಕ್ಷಿಸುವವಳು ಕಾನಮ್ಮ (ವನ ದೇವತೆ), ಊರನ್ನು ರಕ್ಷಿಸುವವಳು ಊರಮ್ಮ, ಕೋಟೆಯನ್ನು ರಕ್ಷಿಸುವವಳು ದುರ್ಗಮ್ಮ. ಈ ರೀತಿ ಅನೇಕ ಮಾತೃ ದೈವಗಳನ್ನು ವಿವಿಧ ರೂಪದಲ್ಲಿ ಕಾಣಬಹುದು.

ದ್ರಾವಿಡರ ಮೇಲೆ ಆರ್ಯರ ಆಕ್ರಮಣದಿಂದಾಗಿ ಹೇರಲ್ಪಟ್ಟ ಸಂಪ್ರದಾಯಗಳಿಂದಾಗಿ ಪುರುಷ ಪ್ರಧಾನತೆ ಮುಖ್ಯ ಭೂಮಿಕೆಗೆ ಬಂತು. ವೈಧಿಕರಲ್ಲಿದ್ದ ಪುರುಷ ದೇವರುಗಳು ದ್ರಾವಿಡರಲ್ಲಿ ಪ್ರಭಾವ ಬೀರಿದವು.

ಮಾತೃ ಆರಾಧನೆ ಬುಡಕಟ್ಟುಗಳಲ್ಲಿ ಮತ್ತು ತಳಸಮುದಾಯಗಳಲ್ಲಿ ಯಾವುದೇ ವೈಭೋಗವಿಲ್ಲದೆ, ಸಾಧಾರಣ ಮರ, ಗಿಡ, ಕಲ್ಲುಗಳಲ್ಲಿ ಮತೃದೇವತೆಗಳ ಆರಾಧನೆ ಅತೀ ಸಹಜ ರೂಪದಲ್ಲಿರುವುದನ್ನು ಕಾಣುತ್ತೇವೆ. ಆದರೆ ವೈಧಿಕರ ಪುರುಷ ದೈವಗಳು ರಾಜಶಾಹಿಯ ಸುಖ ವೈಭೋಗಗಳೊಂದಿಗೆ ಭವ್ಯದೇಗುಲ ಯೋಗ ಭೋಗಗಳ ರೂಪಕಗಳಲ್ಲಿ ಇರುವುದು ಕಾಣುತ್ತೇವೆ.

ಪುರುಷ ಪ್ರಧಾನತೆ ಸಾರ್ವಭೌಮತೆಯನ್ನು ಸ್ಥಾಪಿಸಿದ ನಂತರ ಮಹಿಳೆ ಮತ್ತು ಮಾತೃ ಆರಾಧನೆ ಪ್ರಾಮುಖ್ಯತೆ ಕಡಿಮೆಯಾಯಿತು. ಆರ್ಯರ ಪುರುಷ ಪ್ರಧಾನ ಮೌಲ್ಯ ವಿಜೃಂಭಿಸಿ ಪುರುಷ ದೈವಗಳು ಅಸ್ತಿತ್ವಕ್ಕೆ ಬಂದವು. ಆ ದೈವಗಳ ಪುರಾಣಗಳು, ಕಥೆಗಳು, ಗ್ರಂಥಗಳು ಲಿಖಿತವಾದವು. ಆದರೆ ಮಾತೃ ದೇವತೆಯರ ಆರಾಧನೆ ಬುಡಕಟ್ಟುಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಕಾಣಬಹುದು.

"ಹರಪ್ಪ ಅಥವಾ ಸಿಂಧು ಕಣಿವೆಯ ನಾಗರಿಕತೆಯು ತನ್ನ ಪ್ರಾಚೀನ ಅಲೆಮಾರಿ ತನವನ್ನು ಬಿಟ್ಟುಕೊಟ್ಟು ಗುಂಪಾಗಿ ಒಟ್ಟಾಗಿ ಬದುಕುವ ಸಂಸ್ಕೃತಿಯನ್ನು ಹೊಂದಿದ್ದು. ಮೊದಲು ಗ್ರಾಮ ಕೇಂದ್ರಿತವಾದ ನಾಗರಿಕತೆ ವ್ಯಾಪಾರದತ್ತ ಗಮನ ಹರಿಸಿದಾಗ ಪಟ್ಟಣ ಸಂಸ್ಕೃತಿಯಾಗಿ ಮಾರ್ಪಾಡಾಗಿರಲು ಸಾಧ್ಯ. ಪಟ್ಟಣ ಸಂಸ್ಕೃತಿಗಳು ಹುಟ್ಟುವುದೇ ವ್ಯಾಪಾರದ ಪ್ರಾಮುಖ್ಯತೆ ಹೆಚ್ಚಿದಾಗ. ವ್ಯಾಪಾರ ಮಾಡುವುದಕ್ಕೆ ಪ್ರಾರಂಭ ಮಾಡಿದಾಗಲೆ ಮನುಷ್ಯ ಮೂಲ ಆಶೆಯಗಳು ಬದಲಾವಣೆಯನ್ನು ಪಡೆಯಲು ಸಾಧ್ಯವಾಗಿರಬೇಕು. ಇದು ಸ್ತ್ರೀಯ ಪ್ರಾಮುಖ್ಯತೆಯನ್ನು ಕಡಿಮೆ ಮಾಡಲು, ಅವಳ ಅಧಿಕಾರವನ್ನು ಗಂಡು ಪಡೆಯಲು ಸಾಧ್ಯವಾಯಿತು. ಗಂಡು ಇಲ್ಲಿ ಪ್ರಮುಖನಾಗಲು ಕಾರಣ ದೈಹಿಕ ಬಲವೂ ಒಂದು. ಹೀಗೆ ಪರಿಸ್ಥಿತಿಯು ಸುಧಾರಿಸಿದಂತೆ ಗಂಡು ತನ್ನ ಸ್ಥಾನ ಭದ್ರಪಡಿಸಿಕೊಂಡು, ಹೆಣ್ಣಿನ ಮೇಲಿನ ಅಧಿಕಾರವನ್ನು ಪಡೆಯಲು ಸಾಧ್ಯವಾಗಿರಬೇಕು." (ಕಲವೀರ ಮನ್ವಾಚಾರ ೧೯೯೫)

ಸಮಾಜದಲ್ಲಿ ಪುರುಷ ಪ್ರಧಾನತೆ ಹೆಚ್ಚಾದಂತೆ ಮಾತೃ ಪ್ರಧಾನತೆ ಕಡಿಮೆಯಾಯಿತು. ಅಂತೆಯೇ ಮಾತೃ ಆರಾಧನೆಯ ಜೊತೆಗೆ ತಾಯಿಗಿರುವ ಸ್ಥಾನ ಕುಟುಂಬದ ವ್ಯವಸ್ಥೆಯಲ್ಲಿ ಎರಡನೇ ದರ್ಜೆಗೆ ಇಳಿಯಿತು. ಗಂಡಿನ ಆದ್ಯತೆ ಹೆಚ್ಚಿ, ಹೆಣ್ಣನ್ನು ಸೇವಕಿ ಅಥವಾ ಪುರುಷನ ನಂತರದ ಸ್ಥಾನ ಕೊಡಲಾಯಿತು. ಕುಟುಂಬ ವ್ಯವಸ್ಥೆಯಲ್ಲಿ ಗಂಡು ಮುಖ್ಯಸ್ಥನಾದ ತಾಯಿ ಕುಟುಂಬ ನಿರ್ವಹಣೆಯಲ್ಲಿ ಸಹಾಯಕಿಯಾಗಿ ಗುರುತಿಸಲ್ಪಟ್ಟಳು. ಈ ಕ್ರಿಯೆಯಲ್ಲಿ ಮೂಲ ಆಧ್ಯತೆಯಾಗಿದ್ದ ಮಾತೃ ಆರಾಧನೆಯಲ್ಲೂ ಬದಲಾವಣೆ ಕಂಡು ಬಂದಿತು. ಮಾತೃ ದೈವಗಳಿಗಿಂತ ಪುರುಷ ದೈವಗಳೆ ಶ್ರೇಷ್ಠ ಎಂಬ ಭಾವನೆಯನ್ನು ಜನರಲ್ಲಿ ಬಿತ್ತಲಾಗತೊಡಗಿತು. ಇದರಿಂದ ಮಾತೃದೇವತಗಳು ಪುರುಷ ದೇವರುಗಳ ಮುಂದೆ ಎರಡನೆಯ ದರ್ಜೆಯ ದೈವವಾಗಿ ನಿಲುವಂತಾಯಿತು. ಪುರುಷ ದೇವರುಗಳ ಹೆಂಡತಿಯಾಗಿ ಅಥವಾ ಸೇವಕಿಯಾಗಿ ಮಾತೃದೇವತೆಗಳನ್ನು ಬಿಂಬಿಸಲಾಯಿತು. ಕಾಳಿಯನ್ನು ಉಗ್ರಗೊಳಿಸಿ ಭದ್ರನನ್ನು ಕಾಳಿಯ ಮುಂದೆ ಸೇರಿಸಿ ಭದ್ರಕಾಳಿ ಮಾಡಿದರು. ಈ ರೀತಿ ಹೆಣ್ಣಿನ ಸ್ವಾತಂತ್ರ್ಯಯ, ಅಸ್ಥಿತ್ವವನ್ನು ಗುರುತಿಸುವಲ್ಲಿ ಹಾಗೂ ಮಾತೃ ಆರಾಧನೆಯಲ್ಲಿ ಬದಲಾವಣೆಗಳಾದವು. ಸೃಷ್ಟಿ ಪುರಾಣಗಳಲ್ಲಿ ಪುರುಷ ದೇವರುಗಳ ಹೆಂಡತಿಯರಾಗಿ ಬ್ರಹ್ಮ, ವಿಷ್ಣು, ಮಹೇಶ್ವರರ ಪತ್ನಿಯರಾಗಿ ಸರಸ್ವತಿ, ಲಕ್ಷ್ಮಿ, ಪಾರ್ವತಿ ಅಸ್ತಿತ್ವ ಪಡೆದ್ದಿದ್ದಾರೆ.

"ದಕ್ಷಿಣ ಭಾರತದ ಹಳ್ಳಿಗಳಲ್ಲಿ ಅನೇಕ ಅಮ್ಮಂದಿರು ಜೀವಂತವಿರುವುದು ನಿಜವಾದರೂ ಒಂದೊಂದು ನಿರ್ದಿಷ್ಟ ಅಮ್ಮ ಒಂದೊಂದು ಪ್ರದೇಶಲ್ಲಿ ಚಾರಿತ್ರಿಕ ಕಾರಣಗಳಿಂದಾಗಿ ಪ್ರಸಾರದಲ್ಲಿರುವುದು ಕಂಡು ಬರುತ್ತದೆ. ಇದರಲ್ಲಿ ಒಂದು ಊರು ಕೇಂದ್ರ ಸ್ಥಾನವಾಗಿರುವ ಸಾಧ್ಯತೆ ಇರುತ್ತದೆ." (ಎಸ್ ಎಸ್ ಹಿರೇಮಠ ೧೯೯೩) ಹಾಗೆಯೇ ಗಡಿ ಅಥವಾ ಕೋಟೆ ಕೂಡ ಕೇಂದ್ರ ಸ್ಥಾನವಾಗಿರುತ್ತದೆ. ಯಾವುದಾದರು ರೋಗ ಅಥವಾ ಕಾಯಿಲೆ ನಿವಾರಣೆ ಕೂಡ ಒಂದು ಅಂಶವಾಗಿ ಕಂಡುಬರುತ್ತದೆ.

"ಅನೇಕ ಗ್ರಾಮದೇವತೆಗಳು ಅತೀ ಪ್ರಾಚೀನವಾದ ಭೂಮಿಪೂಜೆ ಅಥವಾ ಮಾತೃಪೂಜೆಯ ಕುರುಹುಗಳಲ್ಲದೆ ಬೇರೆಯಲ್ಲ. ಕೆಲವೊಮ್ಮೆ ಅವು ಫಲಶಕ್ತಿಯ ಸ್ಪಷ್ಟ ಪ್ರತೀಕಗಳಂತೆ ಕಾಣುತ್ತವೆ. ಅರಣ್ಯವಾಸಿ ಬುಡಕಟ್ಟು ಜನಾಂಗಗಳು ಪೂಜಿಸುವ ಪ್ರೇತಾತ್ಮಗಳು, ಗ್ರಾಮ ಸಮುದಾಯಯಗಳು ಬೆಳೆದ ಮೇಲೆ ಗ್ರಾಮದೇವತೆಗಳಾಗಿ ಮಾರ್ಪಾಟು ಹೊಂದಿರುವ ಸಾಧ್ಯತೆಗಳಿವೆ ಅಥವಾ ಐತಿಹಾಸಿಕ ಕಾಲದಲ್ಲಿ ನಡೆದ ಕೆಲವು ಘಟನೆಗಳು ಹಾಗೂ ಆಕಸ್ಮಿಕಗಳು ಕೂಡ ಇಂಥ ದೇವತೆಗಳನ್ನು ಸೃಷ್ಟಿಸಿರಬಹುದು". (ಸಿದ್ಧಲಿಂಗಯ್ಯ ೧೯೯೭ ಪುಸಂ:೧೬)

**ಊರಮ್ಮ:** ಹೆಸರೇ ಸೂಚಿಸುವಂತೆ ಊರನ್ನು ಕಾಪಾಡುವ ತಾಯಿ. ಈ ದೈವ ಅಲೆಮಾರಿತನದ ನಂತರ ನೆಲೆನಿಂತ ಸಂದರ್ಭದಲ್ಲಿ ಸೃಷ್ಟಿಯಾಗಿರುವುದು ಸ್ಪಷ್ಟವಾಗುತ್ತದೆ. ಊರುಗಳ ಉಗಮದ ಜೊತೆಗೆ ಊರನ್ನು ರಕ್ಷಣೆ ಮಾಡುವ ಗ್ರಾಮದೇವತೆಯಾಗಿ ಊರಮ್ಮನನ್ನು ಆರಾಧಿಸುವರು.

**ಮಾರಮ್ಮ:** ಅಲೆಮಾರಿ ಪಶುಪಾಲಕರಲ್ಲಿ ಮಾರಮ್ಮ ಪ್ರಚಲಿತದಲ್ಲಿದ್ದಾಳೆ. ಮಾರಿ ಎಂದರೆ ವಿನಾಶಕಾರಿಯೆಂದು ಕೆಟ್ಟದನ್ನು ನಾಶ ಮಾಡಿ, ಸಮುದಾಯದ ಜನರನ್ನು ರಕ್ಷಣೆ ಮಾಡುತ್ತಾಳೆಂದು ತಿಳಿದು ಮಾರಮ್ಮನನ್ನು ಆರಾಧಿಸುವುದು ಕಂಡು ಬರುತ್ತದೆ.

**ದುರ್ಗಮ್ಮ**: ದುರ್ಗ ಎಂದರೆ ಕೋಟೆ. ರಾಜರು ಮಾಂಡಾಲಿಕರು ದೇಸಾಯಿಗಳು ಮುಂತಾದ ಆಡಳಿತ ವರ್ಗದವರು ಶತ್ರುಗಳಿಂದ ರಕ್ಷಣೆ ಮಾಡಿಕೊಳ್ಳಲು ಕೋಟೆಗಳನ್ನು ಕಟ್ಟಿ, ಕೋಟೆಯ ಪ್ರಮುಖ ದ್ವಾರದಲ್ಲಿ ದುರ್ಗಮ್ಮನ ದೇವಸ್ಥಾನ ಕಟ್ಟಿರುತ್ತಾರೆ. ಈ ದುರ್ಗಮ್ಮ ಬಹಳ ಪರಾಕ್ರಮಿ, ಎಂತಹ ಶತ್ರುಗಳಿದ್ದರೂ ಅವರನ್ನು ನಾಶ ಮಾಡಿ ಕೋಟೆಯನ್ನು ಮತ್ತು ಕೋಟೆಯೊಳಗಿನ ಜನರನ್ನು ರಕ್ಷಣೆ ಮಾಡುತ್ತಾಳೆಂಬ ನಂಬಿಕೆ ಜನರಲ್ಲಿದೆ. ಕೆಲ ಪ್ರದೇಶಗಳಲ್ಲಿ ಕೋಟೆ ಇಲ್ಲದಿದ್ದರೂ ಈ ದೇವತೆ ಕಂಡುಬರುತ್ತಾಳೆ. ಊರಿನ ಹೊರಗೆ ಊರನ್ನು ಕಾಪಾಡುವ ದುರ್ಗಿಯಾಗಿ ದಕ್ಷಿಣ ಭಾರತದ ಅನೇಕ ಗ್ರಾಮಗಳಲ್ಲಿ ಕಾಣಸಿಗುತ್ತಾಳೆ.

**ಮಾಸ್ತಮ್ಮ**: ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮಾಹ ಸತಿ + ಅಮ್ಮ = ಮಾಸ್ತಮ್ಮನಾಗಿರುವುದು. ಆರ್ಯರ ಆಲೋಚನೆಯಿಂದಲೋ ಪುರುಷ ಪ್ರಧಾನತೆಯ ದಬ್ಬಾಳಿಕೆಯಿಂದಲೋ ಗಂಡ ಸತ್ತ ನಂತರ ಹೆಂಡತಿ ಸತಿಯಾಗಿರುವುದು. ಅನೇಕ ಪಶುಪಾಲಕ ಬುಡಕಟ್ಟುಗಳಲ್ಲಿ ಮಾಸ್ತಮ್ಮನ ಆಚರಣೆಗಳು ಕಂಡುಬರುತ್ತವೆ, ಇವರು ಸಾಂಸ್ಕೃತಿಕ ನಾಯಕಿಯರಾಗಿ ಸಮುದಾಯಗಳಲ್ಲಿ ನೆಲೆನಿಂತಿದ್ದಾರೆ. ಪಶುಪಾಲನೆ ಮತ್ತು ಬೇಟೆಯಾಡುವ ಸಮುದಾಯಗಳಲ್ಲಿ ಪುರುಷರು ಯುದ್ಧ, ಜಗಳ ಮತ್ತು ಕಾಡು ಮೃಗಗಳಿಂದ ರಕ್ಷಿಸಿಕೊಳುವಾಗ ಮೃತಪಡುವ ಸಾಧ್ಯತೆ ಹೆಚ್ಚು. ಇಂತಹ ಸಂದರ್ಭದಲ್ಲಿ ಮಹಿಳೆಯರು ಸತಿಪದ್ಧತಿ ಪಾಲಾಗಿದ್ದಾರೆ. ಗಂಡನ ಮೃತದೇಹದೊಂದಿಗೆ ಹೆಂಡತಿಯು ದಹನಗೊಂಡರೆ ಸತ್ತ ಗಂಡನಿಗೆ ಸ್ವರ್ಗಸಿಗುತ್ತದೆಂಬ ನಂಬಿಕೆ ಪ್ರಾಚೀನ ಕಾಲದಲ್ಲಿತ್ತು. ಗಂಡನ ಮರಣ ನಂತರ ಹೆಂಡತಿ ಸತಿ ಪದ್ಧತಿಯನ್ನು ಅನುಸರಿಸಿ ತನ್ನನ್ನು ತಾನು ಬಲಿ ಪಡೆದಾಗ ಅಥವಾ ಬಲವಂತದಿಂದ ಹೆಣ್ಣನ್ನು ಸತಿಗೊಳಪಡಿಸುತ್ತಿದ್ದರು. ಈ ಸತಿಯಾದ ಸ್ಥಳದಲ್ಲಿ ಅವಳ ಸಮಾಧಿ/ ಗುಡಿ ಕಟ್ಟಿ ಮಹಾಸತಿಯೆಂದು ಬಿಂಬಿಸಿ ಆರಾಧನೆಗೆ ಒಳಪಡಿಸಿದ್ದಾರೆ. ಈ ರೀತಿ ಜೀವವನ್ನು ತ್ಯಾಗ ಮಾಡಿದ ತಾಯಿ ಮಹಾಸತಿಯಮ್ಮನಾಗಿ ಆಡು ಭಾಷೆಯಲ್ಲಿ ಮಾಸ್ತಮ್ಮನಾಗಿ ಕಾಣಸಿಗುತ್ತಾಳೆ.

**ಗಾಳೆಮ್ಮ**: ದುಷ್ಟಶಕ್ತಿಗಳಿಂದ ತನ್ನ ಸಮುದಾಯವನ್ನು ರಕ್ಷಿಸಿ ಕ್ಷುದ್ರ ಶಕ್ತಿಗಳನ್ನು ತನ್ನಲ್ಲಿ ಲೀನಗೊಳಿಸಿಕೊಂಡು ಜನರಿಗೆ ಒಳ್ಳೆ ಮಾರ್ಗ ತೋರುವವಳೆ ಗಾಳೆಮ್ಮ. ಗಾಳಿ ಎಂದರೆ ಜನಪದರಲ್ಲಿ ದೆವ್ವ, ಭೂತ, ದುಷ್ಟಶಕ್ತಿ ಎಂದು ಅರ್ಥವಿದೆ. ಪ್ರಕೃತಿಯಲ್ಲಿರುವ ನಕಾರಾತ್ಮಕ ಶಕ್ತಿಗಳಿಂದ ರಕ್ಷಿಸಿಕೊಳ್ಳಲು ಗಾಳೆಮ್ಮನನ್ನು ಆರಾಧಿಸುವರು.

**ಎಲ್ಲಮ್ಮ**: ಸರ್ವರಿಗೂ ತಾಯಿ ಅಥವಾ ಎಲ್ಲರಿಗೂ ಅಮ್ಮ ಎಂಬರ್ಥವಿದೆ. ಎಲ್ಲಮ್ಮನಿಗೆ ಸಂಬಂಧಿಸಿದ ಕಥೆ ರೇಣುಕಾ ಪುರಾಣದಲ್ಲಿದೆ. ಜಮದಗ್ನಿ ಪತ್ನಿ ರೇಣುಕೆ ಮೋಹಕ್ಕೊಳಗಾಗಿ ಪತಿಯ ಸಿಟ್ಟಿಗೆ ಗುರಿಯಾಗುತ್ತಾ_ಳೆ. ತಂದೆಯ ಮಾತು ಮೀರದ ಮಗ ಪರಶುರಾಮ ತನ್ನ ತಾಯಿ ರೇಣುಕೆಯ ಶಿರ ಕತ್ತರಿಸುತ್ತಾನೆ. ಪರುಶುರಾಮ ವರದ ರೂಪದಲ್ಲಿ ತನ್ನ ತಾಯಿಯು ಜೀವ□ತವಾಗಿರಬೇಕೆಂದು ತನ್ನ

ತಂದೆಯಲ್ಲಿ ಕೇಳಿಕೊಳ್ಳುತ್ತಾನೆ. ಕತ್ತರಿಸಿದ ತಲೆ ಮಾದಿಗರ ಮನೆಯ ಬಾನೆಯಲ್ಲಿರುವುದು ತಿಳಿಯುತ್ತದೆ. ಇದನ್ನು ಸಹಿಸದೆ ಕೇವಲ ತಲೆ ಮಾತ್ರ ಅಲ್ಲೆ ಸ್ಥಾಪಿಸಿ ಕೆಳ ಸಮುದಾಯದ ದೈವವಾಗಿ ರೇಣುಕ ಎಂಬ ಹೆಸರಿನ ಬದಲು ಎಲ್ಲಮ್ಮನಾಗಿ ನೆಲೆನಿಂತಿದ್ದಾಳೆ.

**ನಾಗಮ್ಮ:** ಭಾರತದಾದ್ಯಂತ ನಾಗಾರಾಧನೆ ಕಂಡುಬರುತ್ತದೆ. ಪಾಶ್ಚಾತ್ಯರು ಮೊದಲು ಭಾರತಕ್ಕೆ ಬಂದಾಗ ನಾಗಾರಾಧನೆ ಕುರಿತು ಅಣುಕು ಮಾತುಗಳನ್ನು ಆಡಿರುವುದು ನಮ್ಮ ಇತಿಹಾಸದ ಪುಟಗಳಲ್ಲಿ ಸಿಗುತ್ತವೆ. ನಾಗಾರಾಧನೆ ಪ್ರಾಮುಖ್ಯತೆ ಮತ್ತು ಅದರ ಸಂಕೇತವನ್ನು ಅರಿತರೆ ಹಾವುಗಳಿಗೆ, ಹುತ್ತಗಳಿಗೆ, ನಾಗರ ಕಲ್ಲುಗಳಿಗೆ ಪೂಜೆಮಾಡು ಪ್ರಯೋಜಕತ್ವ ತಿಳಿಯುತ್ತದೆ. ನಾಗಾರಾಧನೆ ಹೆಚ್ಚಾಗಿ ಫಲವಂತಿಕೆ ಪಡೆಯಲು ಇಚ್ಛಾಧಾರಣೆಗಳನ್ನು ಪೂರೈಸಿಕೊಳ್ಳಲು ಮಾಡುತ್ತಾರೆ. ಇಲ್ಲಿ ಹಾವಿಗೂ ಫಲವಂತಿಗೆಗೂ ಇವರು ಸಂಕೇತವೆಂದರೆ, ಹಾವಿನ ಚಲನೆಯನ್ನು ಗಮನಿಸಿದಾಗ ಭೂಮಿಗೂ ಮತ್ತು ಹಾವಿಗೂ ಒಂದು ಘರ್ಷಣೆ ನಡೆಯುತ್ತದೆ. ಹಾವು ತೆವಳುವ ರೀತಿಯಲ್ಲಿ ಹಾವಿಗೂ ಮತ್ತು ಭೂಮಿಯ ನಡುವೆ ನಡೆಯುವ ಪ್ರಕ್ರಿಯೆ ಗಂಡು ಹೆಣ್ಣು ಸಂಧಿಸುವ ಘರ್ಷಣೆಯನ್ನು ಹೋಲುತ್ತದೆ. ಸಾಂಕೇತಿಕವಾಗಿ ಹಾವು ಮತ್ತು ಭೂಮಿಯ ನಡುವಿನ ತಿಕ್ಕಾಟವು ಗಂಡು ಹೆಣ್ಣು ನಡುವಿನ ಸಂಬಂಧವನ್ನು ಸೂಚಿಸುತ್ತದೆ. ಈ ಕಾರಣಗಳಿಂದಾಗಿಯೇ ಮಕ್ಕಳಾಗದವರು ಹುತ್ತಕ್ಕೆ ಪೂಜೆ ಮಾಡುವ ಮೂಲಕ ಪರಿಹಾರಗಳನ್ನು ಕಂಡುಕೊಂಡಿರಬೇಕು. ಈ ನಾಗಾರಾಧನೆ ಬುಡಕಟ್ಟುಗಳಲ್ಲಿ ಅಮ್ಮನ ರೂಪದಲ್ಲಿ ಫಲವಂತಿಯ ಸಂಕೇತವಾಗಿ ಪೂಜಿಸಲ್ಪಡುತ್ತಿರುವುದು ಕಂಡುಬರುತ್ತದೆ.

**ಕಸುವಮ್ಮ:** ಕಸುವು ಎಂದರೆ ಫಲವತ್ತತೆ ಎಂದರ್ಥ. ಭೂಮಿ ಕಸುವಿದೆ ಎಂದು ಸಾಮಾನ್ಯವಾಗಿ ಫಲವತ್ತಾದ ನೆಲಕ್ಕೆ ಹೇಳುತ್ತಾರೆ. ಹೆಣ್ಣಿನ ಗರ್ಭಧಾರಣೆ ಅಥವಾ ಮಗುವಿಗೆ ಜನ್ಮ ನೀಡುವ ಶಕ್ತಿಯನ್ನು ಸಹ ಕಸುವು ಎಂದು ಕರೆಯುತ್ತಾರೆ. ಇನ್ನೊಂದು ಅರ್ಥದಲ್ಲಿ ಕಸ ಎಂದರೆ ಮಗು ಜನನದ ಸಂದರ್ಭದಲ್ಲಿ ತಾಯಿಯ ಗರ್ಭ ಚೀಲದಿಂದ ಮಗುವನ್ನು ಭೂಮಿಗೆ ತರಲು ಸುತ್ತಲಿನ ಚೀಲವನ್ನು ಕಸ ಎಂದು ಕರೆಯುತ್ತಾರೆ. ಹೆಣ್ಣಿನ ಫಲವತ್ತತೆಯ ಪ್ರತೀಕವಾದ ಕಸುವಮ್ಮನನ್ನು ಬುಡಕಟ್ಟುಗಳಲ್ಲಿ ಆರಾಧಿಸುತ್ತಾರೆ. ಕಸುವಮ್ಮ ತಾಯಿತನದ ಸಂಕೇತವೆಂದೇ ಹೇಳಬಹುದು.

ಭಾರತದಲ್ಲಿ ತಾಯಿ/ಮಾತೃ ಆರಾಧನೆಯ ಸ್ವರೂಪಗಳನ್ನು ಅನೇಕ ಬಗೆಯಲ್ಲಿ ಕಾಣಬಹುದು. ಕಾಡಿನ ತಾಯಿ ಮರ ಗಿಡಗಳ ರೂಪದಲ್ಲಿ ಗ್ರಾಮದೇವತೆಗಳನ್ನು ಕಲ್ಲಿನ ರೂಪದಲ್ಲಿ, ಗಂಗಮ್ಮನನ್ನು ನೀರಿನ ರೂಪದಲ್ಲಿ ಹೀಗೆ ಇನ್ನು ಕೆಲವು ಕಲ್ಲಿನ ಅಥವಾ ಮರದ ಮೂರ್ತಿಗಳ ರೂಪವನ್ನು ಪಡೆದುಕೊಂಡಿವೆ. ಕೆಲವು ಭಾಗಗಳಲ್ಲಿ ಯೋನಿ ಆರಾಧನೆಯುಂಟು. ಇಲ್ಲಿ ತಾಯಿ ಸಂಕೇತವಾಗಿ ಯೋನಿ ದೈವ ಸ್ವರೂಪ ಪಡೆದಿದೆ. ಹೆಣ್ಣುತನದ ಹಾಗೂ ಲೈಂಗಿತೆಯಲ್ಲಿ ಹೆಣ್ಣಿನ ಪಾತ್ರ ಎಷ್ಟು ಮುಖ್ಯವೆಂಬುದನ್ನು ಮತ್ತು ಮುಂದಿನ ಪೀಳಿಗೆಯನ್ನು ಮುಂದುವರಿಸಲು ಒಂದು ಹೆಣ್ಣು ಅತಿ ಪ್ರಮುಖ ಪಾತ್ರವನ್ನು ವಹಿಸುವ ಸಂಕೇತವೇ ಯೋನಿ ಆರಾಧನೆಯಾಗಿದೆ. ಲಜ್ಜೇಗೌರಿ ಮೂರ್ತಿಗಳು ಒಂದು ಹೆಣ್ಣು ಮಗುವಿಗೆ ಜನ್ಮ ನೀಡುವ ಸ್ಥಿತಿಯ ಭಂಗಿಯಲ್ಲಿರುವುದು ಕಾಣಬಹುದು.

## ಕುರುಮನ್ಸ್ ರಲ್ಲಿ ಕಸುವಮ್ಮ ಆಚರಣೆ

ದಕ್ಷಿಣ ಭಾರತದ ಪಶುಪಾಲನಾ ಬುಡಕಟ್ಟಾದ ಕುರುಮನ್ಸ್ ಕುಲಕಸುಬು ಕುರಿ ಕಾಯುವುದಾಗಿದೆ. ಇವರು ತಮಿಳನಾಡು, ಕೇರಳ ಕರ್ನಾಟಕದ ಗಡಿ ಭಾಗಗಳಲ್ಲಿ ಕಂಡುಬರುತ್ತಾರೆ. ಇವರಲ್ಲಿ ಪಿತೃ ಪ್ರಧಾನ ದೈವರಾಧನೆ ಪ್ರಮುಖವಾಗಿ ಕಂಡುಬರುತ್ತದೆ. ಆದರೆ ಸಮುದಾಯದ ಮೂಲ ಆರಾಧನೆಯ ಭಾಗವಾಗಿ ಇಂದಿಗೂ ಆಚರಣೆಯಲ್ಲಿ ಮಾತೃದೇವತೆಗಳಿವೆ. ಈ ರೀತಿ ಮಾತೃದೇವತೆಗಳ ಆರಾಧನೆಯಲ್ಲಿ ಕರಿಯಮ್ಮ, ಮಾರಮ್ಮ, ಕಸುವಮ್ಮ ಮುಂತಾದ ದೇವರುಗಳು ಕಂಡುಬರುತ್ತಾರೆ.

ದೈವದ ಕಲ್ಪನೆ ಕಾಲದಿಂದ ಕಾಲಕ್ಕೆ ಒಂದೊಂದು ಸ್ವರೂಪ ಪಡೆದುಕೊಂಡು ಬಂದಿರುವುದು ನಾವು ಕಾಣುತ್ತೇವೆ. ಮನೆಯನ್ನು ರಕ್ಷಿಸಿ ಮಗುವನ್ನು ಪೋಷಿಸಿದ ತಾಯಿ ಮಾತೆಯಾಗಿ, ರಕ್ಷಕಿಯಾಗಿ ದೈವ ಸ್ವರೂಪಿಯಾದಳು. ಮನು ಕುಲವನ್ನು ಕಾಪಾಡಿ ರಕ್ಷಿಸಿಕೊಂಡು ಬಂದಿರುವ ದೈವವಾಗಿದ್ದಾಳೆ. ಇನ್ನು ಕೆಲವು ದೈವಗಳು ಸಾಮಾಜಿಕ ನಿಯಂತ್ರಣ ನಿರ್ವಹಿಸುವ ಪಾತ್ರವಹಿಸುತ್ತವೆ. ಪಾಪ ಪುಣ್ಯಗಳ, ತರ್ಕ,

ಶಾಪ ಕೋಪಗಳ ಭಯದಿಂದ ಸಮುದಾಯವನ್ನು ಸರಿದಾರಿಯಲ್ಲಿ ನಡೆಸುತ್ತಾ ಸರ್ವಾವ್ಯಾಪಿಯಾಗಿ ನೆಲೆಸಿದವು.

ಇನ್ನು ಕೆಲವು ದೇವರುಗಳು ಹಾಗೂ ಆಚರಣೆಗಳು ಸಮುದಾಯಕ್ಕೆ ಶಿಕ್ಷಣ ನೀಡುವ ಪಾತ್ರವಹಿಸಿದವು. ಶಿಕ್ಷಣ ಎಂದರೆ ತಿಳುವಳಿಕೆ, ಅರಿವು ಮತ್ತು ಪ್ರಕೃತಿಯ ಜ್ಞಾನವನ್ನು ತಿಳಿಸುವ ದೇವರುಗಳಾದರು. ಇಂತಹ ಆಚರಣೆಯೇ ಕುರುಮನ್ಸ್‌ರಲ್ಲಿ ಕಸುವಮ್ಮ ದೇವರು ಮೊದಲೇ ಹೇಳಿದ ಹಾಗೇ ಕಸುವಮ್ಮ ತಾಯಿತನದ ಪ್ರತಿರೂಪ, ಹೆಣ್ಣು ಮಗುವಿಗೆ ಜನ್ಮ ನೀಡುವ ಶಕ್ತಿಯ ಪ್ರತೀಕವೇ ಕಸುವಮ್ಮ.

## ಕುರುಮನ್ಸ್‌ರಲ್ಲಿ ಕಸುವಮ್ಮ ಆಚರಣೆಯ ಸ್ವರೂಪ

ಕಸುವಮ್ಮನ ಕೊಟ್ಟು: ಇದು ಒಂದು ಸಮುದಾಯದ ನೃತ್ಯ ಶೈಲಿಯಲ್ಲೊಂದಾಗಿದೆ. ಲೈಂಗಿಕ ಸಂಭೋಗದ ಅಣಕು ಪ್ರದರ್ಶನದ ರೂಪಕವೇ ಕಸುವಮ್ಮನ ಕೊಟ್ಟು. ಈ ಆಚರಣೆ ಮಾಡಿದರೆ ಸಮುದಾಯದ ಆರೋಗ್ಯ ಮತ್ತು ಸಂಪತ್ತನ್ನು ತಾಯಿ ಕಾಪಾಡುತ್ತಳೆಂದು ಇವರ ನಂಬಿಕೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕುರುಮನ್ಸು ತಮ್ಮ ಕುಲ ದೇವರು ಗುಡಿಗಳಲ್ಲಿ ಕುಲದೇವರ ಮೂರ್ತಿಯ ಜೊತೆ ಮರದಲ್ಲಿ ಕೆತ್ತಿಸಿದ ಶಿಶ್ನವನ್ನು ದೇವರುಗಳೊಟ್ಟಿಗೆ ಪೂಜಿಸುತ್ತಾ ರೆ. ಪುರುಷ ಪ್ರಧಾನತೆ ಹಾಗೂ ಲಿಂಗ/ ಶಿವನ ರೂಪದಲ್ಲಿ ಶಿಶ್ನವನ್ನು ಆರಾಧಿಸುವುದು ದ್ರಾವಿಡರಲ್ಲೂ ಕಂಡುಬರುತ್ತದೆ. ಕುರುಮನ್ಸ್ ಈ ರೀತಿ ಪೂಜಿಸಲ್ಪಡುವ ಶಿಶ್ನವು ಮಾತ್ರ ದೈವವಾದ ಕಸುವಮ್ಮನ ಆರಾಧನೆಯ ಆಚರಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಕೇವಲ ಸಮುದಾಯದವರು ಮಾತ್ರ ಪಾಲ್ಗೊಂಡು ಮಾಡುವ ಈ ಆಚರಣೆ ಹೊಸ ಪೀಳಿಗೆಗೆ ಲೈಂಗಿಕತೆಯ ಅರಿವು ಮೂಡಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಈ ಸಮುದಾಯದಲ್ಲಿ ಪೂಜೆ ಅಥವಾ ಯಾವುದೇ ದೈವದ ಕಾರ್ಯದಲ್ಲಿ ಮಹಿಳೆಯರ ಭಾಗವಹಿಸುವಿಕೆ ಕಡಿಮೆ. ಕೇವಲ ಪ್ರೇಕ್ಷಕರ ರೂಪದಲ್ಲಿ ಭಕ್ತರಾಗಿ ಮಾತ್ರ ದೈವಾರಾಧನೆಯಲ್ಲಿ ಪಾಲ್ಗೋಳ್ಳುತ್ತಾರೆ. ಇವರಲ್ಲಿ ಪುರುಷರ ಪ್ರಧ್ಯಾನತೆ ಹೆಚ್ಚು, ದೈವದ ಕಾರ್ಯಮಾಡುವುದಕ್ಕೆ ಸಮುದಾಯದಲ್ಲಿ ತಮ್ಮಡಿ(ಪೂಜಾರಿ)ಗಳನ್ನು ನೇಮಿಸಿರುತ್ತಾರೆ. ಈ ಆಚರಣೆಯಲ್ಲಿ ಸಮುದಾಯದ ತಾಯಿಯಾದ ಕಸುವಮ್ಮನ ವೇಷದರಿಸಿರುತ್ತಾರೆ ಮತ್ತು ಇನ್ನೊಬ್ಬ ತಮ್ಮಡಿಯು ಕಸುವಮ್ಮನ ಗಂಡನಾದ ಜಗರಾಯನ ವೇಷ ದಾರಿಸಿರುತ್ತಾನೆ.

ಕಸುವಮ್ಮನ ವೇಷ ಎಂದರೆ ಹೆಣ್ಣಿನ ಸೌಭಾಗ್ಯಗಳೊಂದಿಗೆ ಸೀರೆ ಉಟ್ಟು, ಬಳೆ ತೊಟ್ಟು, ಹೂ ಮುಡಿದು, ಕುಂಕುಮ, ಅರಿಶಿನ, ಧರಿಸಿ ತಯಾರಾಗಿರುತ್ತಾರೆ. ಜಗರಾಯನ ವೇಷಧಾರಿ ತನ್ನ ಪುರುಷ ಶಕ್ತಿಯ ಪ್ರದರ್ಶನ ರೂಪದಲ್ಲಿ ಕೇವಲ ಸೊಂಟಕ್ಕೆ ದೋತಿಯನ್ನು ಕಟ್ಟಿರುತ್ತಾನೆ. ಅದರ ಸುತ್ತ ಬೇವಿನ ಸೋಪ್ಪು ಕಟ್ಟಿಕೊಂಡಿರುತ್ತಾನೆ ಹಾಗೂ ಮುಖ್ಯವಾಗಿ ಪ್ರತಿ ಹಬ್ಬ ಜಾತ್ರೆಯಲ್ಲಿ ಪೂಜಿಸಲ್ಪಡುವ ಮರದ ಶಿಶ್ನವನ್ನು ಒಂದು ದಾರದ ಸಹಾಯದಿಂದ ತನ್ನ ಕಿಬ್ಬೊಟ್ಟೆಯ ಜಾಗದಲ್ಲಿ ಕಟ್ಟಿಕೊಂಡಿರುತ್ತಾನೆ. ನೃತ್ಯ ರೂಪಕ/ಪೂಜೆ ಪ್ರಾರಂಭವಾಗುವ ವೇಳೆಗೆ ಸಮುದಾಯದಲ್ಲಿ ಮಕ್ಕಳಿಗಾಗಿ ಹಂಬಲಿಸುತ್ತಿರುವ ಜೋಡಿಗಳನ್ನು ಮತ್ತು ಹೊಸ ಮದುವೆ ಜೋಡಿಗಳನ್ನು ಹಾಗೂ ಪ್ರತ್ಯೇಕ ಗಂಡು ಮಗುವಿಗಾಗಿ ಹಂಬಲಿಸುವ ದಂಪತಿಗಳನ್ನು ಮುಂದೆ ನೋಡಲು ಬಿಟ್ಟಿರುತ್ತಾರೆ.

ಈ ಸಂದರ್ಭದಲ್ಲಿ ಕಸುವಮ್ಮ ಮತ್ತು ಜಗರಾಯನು ಗಂಡ ಹೆಂಡತಿಯಾಗಿ ಮಕ್ಕಳಿಗಾಗಿ ಹಂಬಲಿಸುವ ಮಾತುಕತೆಯ ಸಂಭಾಷಣೆಯನ್ನು ಮಾಡುತ್ತಾರೆ. ಕಸುವಮ್ಮ ಸಂಬಂಧಿಸಿದ ಹಾಡು ಕಥೆಯನ್ನು ಹೇಳುತ್ತಿರುತ್ತಾರೆ. ಕಸುವಮ್ಮ ತನ್ನ ಗಂಡನ ಹಿಂದು ಮುಂದು ಓಡಾಡುತ್ತಿರುತ್ತಾಳೆ. ಜಗರಾಯ ತನ್ನ ಪುರುಷತ್ವದ ಪ್ರತೀಕವನ್ನು, ತನ್ನ ಬಲವನ್ನು ತೋರಿಸುತ್ತಾನೆ. ಲೈಗಿಂಕ ಕ್ರಿಯೆಯನ್ನು ಹೋಲುವ ಅಣುಕು ನೃತ್ಯವನ್ನು ಮಾಡುತ್ತಿರುತ್ತಾರೆ.

ಸಾಮಾನ್ಯವಾಗಿ ಈ ಆಚರಣೆಯು ಊರ ಮಧ್ಯ ದೇವಸ್ಥಾನದ ಪ್ರಂಗಣದಲ್ಲಿ ಇಲ್ಲವದರೆ ಬಯಲು ಪ್ರದೇಶದಲ್ಲಿ ನಡೆಯುತ್ತದೆ. ನೆರೆದಿರುವ ಜನರು ಆಚರಣೆಯನ್ನು ನೋಡಲು ಸುತ್ತುವರೆದಿರುತ್ತಾರೆ. ಇವರಲ್ಲಿ ಒಂದು ನಂಬಿಕೆ ಇದೆ ಮಕ್ಕಳಾಗದ ಹೆಂಗಸರನ್ನು ಜಗರಾಯನ ವೇಷಧಾರಿ ಬಂದು

ಮುಟ್ಟಿದರೆ ಆ ಹೆಣ್ಣುಮಗಳಿಗೆ ತಾಯಿತಕ್ಕೆ ದೇವರ ಆರ್ಶೀವಾದ ದೊರೆತು ಮಕ್ಕಳಾಗುತ್ತಾರೆಂಬ ನಂಬಿಕೆ. ಸುತ್ತುವರಿದ ಜನರ ನಡುವೆ ಇರುವ ಮಕ್ಕಳಿಗಾಗಿ ಹಂಬಲಿಸುತ್ತಿರುವ ಮಹಿಳೆಯರನ್ನು ಜಗರಾಯ ವೇಷಧಾರಿ ಬಂದು ಹಿಂದಿನಿಂದ ತಾಕಿ ಹೋಗುತ್ತಾ_ರೆ. ಈ ಆಚರಣೆಯಲ್ಲಿ ಪಾಲ್ಗೊಂಡು ಮಕ್ಕಳನ್ನು ಪಡೆದ ಉದಾಹರಣೆಗಳನ್ನು ಕಸುವಮ್ಮನ ಶಕ್ತಿ ಎಂದು ಸಮುದಾಯದವರು ವಿವರಿಸುತ್ತಾರೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಕಸುವಮ್ಮ ಕೊಟ್ಟು ಇಂತಹ ಆಚರಣೆಗಳು ಯಾಕೆ ಹುಟ್ಟಿಕೊಂಡವು ಎಂಬ ಪ್ರಶ್ನೆ ಮೂಡುತ್ತದೆ. ಬುಡಕಟ್ಟುಗಳ ಆರಂಭೀಕ ಅಂತದಲ್ಲಿ ಮುಕ್ತ ಲೈಂಗಿಕತೆ ಇದ್ದುದ್ದನ್ನು ಗಮನಿಸಬಹುದು. ಲೈಂಗಿಕ ಪ್ರಕ್ರಿಯೆ /ಲೈಂಗಿಕತೆಯ ಕುರಿತು ಯಾವುದೇ ಮುಜಗರವಿಲ್ಲದೆ ಮಾತು ಅಥವಾ ಬೈಗುಳಗಳ ರೂಪದಲ್ಲಿರುವುದು ಕೂಡ ಗಮನಿಸಬಹುದು. ಶಿಷ್ಟ ಪರಂಪರೆಯ ನಾಗರೀಕತೆ ಹೆಚ್ಚಿದಂತೆಲ್ಲ ಲೈಂಗಿಕತೆಯಲ್ಲಿದ ಮುಕ್ತತೆ ಕಡಿಮೆಯಾಗಿ ಗೌಪ್ಯತೆ ಶುರುವಾಯಿತು. ಮಾತು/ ಬೈಗುಳಗಳ ಸ್ವರೂಪದಲ್ಲೂ ಬದಲಾವಣೆ ಕಂಡುಬರುತ್ತದೆ.

ಕಸುವಮ್ಮನ ಆಚರಣೆಯಲ್ಲಿ ಅತೀ ವೈಭವವೇನು ಇರುವುದಿಲ್ಲ. ಸಮುದಾಯದ ಜನ, ತಮಟೆಯವರು ಮತ್ತು ತಮ್ಮಡಿಗಳಿರುತ್ತಾರೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಸಮುದಾಯದ ಯುವ ಪೀಳಿಗೆಗೆ ಲೈಂಗಿಕ ತಿಳಿವಳಿಕೆಯನ್ನು ಮೂಡಿಸಲು ಕಸುವಮ್ಮ ದೈವದ ರೂಪದಲ್ಲಿ ಆಚರಣೆಯಾಗಿ ಕುರುಮನ್ಸ್ಸಲ್ಲಿ ಇಂದಿಗೂ ಪ್ರಚಲಿತದಲ್ಲಿದೆ. ಕೆಲವು ಪ್ರದೇಶಗಳಲ್ಲಿ ಕಸುವಮ್ಮ ಆಚರಣೆ ರೂಪದಲ್ಲಿ ಇಲ್ಲದಿದ್ದರು ಕುರುಮನ್ಸ್ ದೇವರು ಗುಡಿಗಳಲ್ಲಿ ದೇವರು ಮೂರ್ತಿಗಳ ನಡುವೆ ಮರದಿಂದ ಕೆತ್ತಿಸಿದ ಶಿಶ್ನವಂತೂ ಪೂಜಿಸಲ್ಪಡುತ್ತಿದೆ. ಬೆಳೆಯುತ್ತಿರುವ ಸಮಾಜದಲ್ಲಿ ಎಷ್ಟೋ ಮೂಲ ಆಚರಣೆಗಳು ತನ್ನ ಸ್ವರೂಪ ಬದಲಾಗಿದ್ದರೂ ರೂಢಿಗಳಲ್ಲಿ ಸಂಪ್ರದಾಯಗಳನ್ನು ತನ್ನ ಕುರುಹು ಬಿಟ್ಟು ಹೋಗಿರುತ್ತವೆ. ಈ ರೀತಿಯ ಒಂದು ಕುರುಹು ಕಸುವಮ್ಮ ಆಚರಣೆ.

ಒಂದು ಬುಡಕಟ್ಟಿನ ಮೂಲಕ ಲೈಂಗಿಕ ಶಿಕ್ಷಣ ಆಚರಣೆ ರೂಪದಲ್ಲಿ ಬರಬೇಕಾದರೆ ವಿವಾಹ ಪದ್ಧತಿಯನ್ನು ಅರಿಯುವುದು ಮುಖ್ಯವಾಗುತ್ತದೆ. ಇಲ್ಲಿ ಸ್ಪಷ್ಟವಾಗುವುದೇನೆಂದರೆ ಈ ಸಮುದಾಯದಲ್ಲಿ ಬಾಲ್ಯ ವಿವಾಹ ಪದ್ಧತಿ ಒಂದು ಕಾಲಕ್ಕಿತೆಂಬುದು. ಅರಿಯದ ಎಳೆ ವಯಸ್ಸಿನಲ್ಲಿ ಮದುವೆ ಮಾಡಿದಾಗ ಹೆಣ್ಣಾಗಲಿ ಗಂಡಾಗಲಿ ಮನೆಯಲ್ಲಿ ಹಿರಿಯರನ್ನು ನೋಡಿ ಜೀವನದ ಜವಾಬ್ದಾರಿಯನ್ನು ಕಲಿಯುತ್ತಾರೆ. ಪ್ರೌಡಾವಸ್ಥೆಗೆ ತಲುಪುವ ಪೂರ್ವ ವಿವಾಹವಾಗಿ ಗೃಹಸ್ಥ ಜೀವನಕ್ಕೆ ಕಾಲಿಟ್ಟವರಿಗೆ ಸಾಂಸಾರಿಕ ಜೀವನದ ಕುರಿತು ತಿಳುವಳಿಕೆ ಕೊಡಲು, ದೇವರ ಆಚರಣೆಯ ಮೂಲಕ, ಅರಿವು ಮೂಡಿಸಿ ಸಮುದಾಯವನ್ನು ಮುಂದುವರೆಸಿಕೊಂಡು ಹೋಗುವ ಆಶೆಯಗಳಾಗಿರುತ್ತವೆ. ಬಾಲ್ಯ ವಿವಾಹವಾಗಿ ಒಂದೇ ಸೂರಿನಡೆ ಬೆಳೆಯುವ ಇಬ್ಬರು ಮಕ್ಕಳ ನಡುವೆ ಇದ್ದ ಸಂಬಂಧವು ಪ್ರೌಡಾವಸ್ಥೆಗೆ ಬಂದಾಗ ಬದಲಾಗುತ್ತದೆ. ಈ ರೀತಿ ಬದಲಾವಣೆಯ ಸಾಂಸಾರಿಕ ಜೀವನ ಶುರು ಮಾಡಿಸಲು ಕಸುವಮ್ಮನಂತಹ ಆಚರಣೆಗಳು ಯುವ ಪೀಳಿಗೆಗೆ ಮುಕ್ತ ಆಲೋಚನೆಗಳತ್ತ ದಾರಿಯಾಗುತ್ತದೆ.

## ಸಮಾರೋಪ

ಆಚರಣೆ ಸಂಪ್ರದಾಯಗಳ ಹೆಸರಿನಲ್ಲಿ ನಮ್ಮ ಪೂವ□ಜರು ಆನೇಕ ಜ್ಞಾನ ಸಂಪ್ಪತ್ತನು ಹುದುಗಿಸಿಟ್ಟಿದಾರೆ. ಮೇಲ್ನೋಟಕ್ಕೆ ಮೂಡ ಆಚರಣೆಗಳಂತೆ ಕಂಡರು ಪ್ರತೀ ಸಂಪ್ರದಾಯಗಳು, ಆಚರಣೆಗಳು ಅರಿವು ಮೂಡಿಸುವ ಪಾಠಗಳಾಗಿರುತ್ತವೆ. ಬುಡಕಟ್ಟುಗಳಲ್ಲಿ ಮಾತೃ ಪ್ರಧಾನತೆ ಹೆಚ್ಚು. ಮಾತೃ ಆರಾಧನೆಯ ಮೂಲ ಸ್ವರೂಪಗಳು ಇಂದಿಗೂ ಜಿವಂತಿಸುತ್ತಿರುವುದು ಬುಡಕಟ್ಟು ಸಮುದಾಯಗಳಲ್ಲಿ. ಸಮಾಜವನ್ನು ಸ್ವಾಸ್ತ್ಯರೀತಿಯಲ್ಲಿ ಮುಂದುವರೆಸಲು ಅಮ್ಮನಾಗಿ, ಕಾಪಾಡುವ ದೈವವಾಗಿ ಅರಿವು ಮಾಡಿಸುವ ಆಚರಣೆಯಾಗಿ ಮಾತೃ ದೇವರುಗಳು ಬಹು ಮುಖ್ಯ ಪಾತ್ರವಹಿಸುತ್ತವೆ. ಅಂತಹ ಆಚರಣೆಗಳಲ್ಲೊಂದಾದ ಕಸುವಮ್ಮ ಕೊಟ್ಟು ಕುರಿತು ಪ್ರಸ್ತುತ ಬರಹದಲ್ಲಿ ತಿಳಿಸಲಾಗಿದೆ.

**ಗ್ರಂಥ ಋಣ**


- ಗಂಗಾಧರ ದೈವಜ್ಞ, ಶಿರಸಂಗಿ ಕಾಳಮ್ಮ, ಶ್ವೇತ ಭಾಗೀರಥಿ ಪ್ರಕಾಶನ ಹೊಸಪೇಟೆ, ೨೦೦೨
- ಚಂದ್ರಪ್ಪ ಎನ್, ಎಲ್ಲಮ್ಮ ಒಂದು ಜಾನಪದೀಯ ಅಧ್ಯಯನ, ಮುಂಡ ಪ್ರಕಾಶನ ಬೆಂಗಳೂರು ೨೦೦೨
- ಬೋರಲಿಂಗಯ್ಯ ಹಿ ಚಿ, ಬುಡಕಟ್ಟು ದೈವಾರಾಧನೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೫
- ರಾಜಾರಾಮ ಹೆಗಡೆ, ಲೌಕಿಕ ಅಲೌಕಿಕ, ಆನಂದಕಂದ ಗ್ರಂಥಮಾಲೆ ಮಲ್ಲಾಡಿಹಳ್ಳಿ, ೨೦೦೧
- ವಿಠಲರಾವ್ ಟಿ ಗಾಯಕ್ವಾಡ್, ಲಜ್ಜಾಗೌರಿ, ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೯
- ಸಿದ್ದಲಿಂಗಯ್ಯ, ಗ್ರಾಮದೇವತೆಗಳು, ಮೂಲಭಾರತಿ ಪ್ರಕಾಶನ ಬೆಂಗಳಾರು. ೧೯೯೭
- ಹಿರೇಮಠ ಎಸ್ ಎಸ್, ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ ಜಾತ್ರೆಗಳು, ಸಮತಾ ಪ್ರಕಾಶನ ಹೊಸಪೇಟೆ ೧೯೯೩

ಅಪ್ರಕಟಿತ ಪ್ರಬಂಧ

- ಕಲವೀರ ಮನ್ವಚಾರ, ಮಾತೃ ದೇವತಾ ಆರಾಧನೆ ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ ಫಿಲ್ ಪ್ರಬಂಧ ೧೯೯೫

English

- Masakazu Tanaka, Parorns Devotees and Goddesses, Manohar publications Delhi, 1997
- Metry K M, Kurumans (A group of tribes), Vidhyanidhi Prakasana, Gadag, 2021